**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 816/2021</u>**

**ಪ್ರಾಸಾಃ- 14 ಚಾಸಾಃ- 25**

| | | |
|---|---|---|
| ಸಾಕ್ಷಿಯ ಹೆಸರು | : | ಮಹಾದೇವ ಗೌಡ |
| ತಂದೆಯ ಹೆಸರು | : | ಈಶ್ವರ್ ಗೌಡ |
| ವಯಸ್ಸು | : | 43 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 22.8.2024**

**<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>**

1. ನನಗೆ ಚಾಸಾ 3 ನೇ ಆರೋಪಿ ಪರಿಚಯ ಇರುತ್ತದೆ. ನನ್ನದು ಕೆ ಎ 20 ಎನ್ 7823 ಮಾರುತಿ ಶಿಫ್ಟ್ ಡಿಜೈರ್ ಕಾರು ಇರುತ್ತದೆ. ನಾನು 3 ನೇ ಆರೋಪಿಗೆ ನನ್ನ ಕಾರನ್ನು 2021 ರ ಲಾಕ್‌ಡೌನ್ ಸಮಯದಲ್ಲಿ ಆತನ ಹೆಂಡತಿಗೆ ಅನಾರೋಗ್ಯ ಇದ್ದ ಕಾರಣ ಊರಿಗೆ ಬಿಟ್ಟು ಬರುತ್ತೇನೆ ಎಂದು ಹೇಳಿ ತೆಗೆದುಕೊಂಡಿದ್ದನು. ನಂತರ 2-3 ದಿನಗಳ ಮೇಲೆ ಬಂದನು. ಆ ಸಮಯದಲ್ಲಿ ಆತನ ಮೊಬೈಲ್ ಸ್ವಿಚ್ ಆಫ್ ಮಾಡಿದ್ದನು. ನಂತರ ನನ್ನ ಕಾರನ್ನು ನನಗೆ ಕೊಟ್ಟು ಹೋದನು. ತಡವಾಗಿ ಕಾರನ್ನು ಹಿಂದುರಿಗಿಸಿದ ಬಗ್ಗೆ ನಾನು ಕೇಳಲಿಲ್ಲ. ಕಾರಣ ಸದರಿ ಕಾರು ಬಿಟ್ಟು ಹೋಗುವಾಗ ನಾನು ಮನೆಯಲ್ಲಿರಲಿಲ್ಲ. ನಂತರ ಆರು ತಿಂಗಳಿಗೆ ತನಿಖಾಧಿಕಾರಿಯು ಬಂದು ಕಾರಿನ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ನಂತರ ಪೋಲೀಸರು ಗಾಡಿ ತೆಗೆದುಕೊಂಡು ಪೋಲೀಸ್ ಠಾಣೆಗೆ ಬರುವಂತೆ ಹೇಳಿದರು. ನಾನು ಠಾಣೆಗೆ ಹೋದಾಗ ನನ್ನ ಕಾರು ತೆಗೆದುಕೊಂಡು ಹೋದವರು ಕೊಲೆ ಮಾಡಿರುತ್ತಾರೆ ಎಂದು ತಿಳಿಸಿದರು. ಪೋಲೀಸರು ಇಬ್ಬರನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ನ್ಯಾಯಾಲಯದ ಆದೇಶದ ಮೇರೆಗೆ ಕಾರನ್ನು

ಬಿಡುಗಡೆಗೊಳಿಸಿಕೊಂಡಿರುತ್ತೇನೆ. ಸಾಕ್ಷಿಯು 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ 3 ನೇ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ರೂ. 500 ಸಾಕ್ಷಿ ಭತ್ಯೆಯೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು).

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 816/2021</u>**

**ಪ್ರಾಸಾಃ- 15 ಚಾಸಾಃ- 28**

| | | |
|---|---|---|
| ಸಾಕ್ಷಿಯ ಹೆಸರು | : | ಶೇಖರ್ |
| ತಂದೆಯ ಹೆಸರು | : | ಲೋಕರಾಜ್ |
| ವಯಸ್ಸು | : | 25 ವರ್ಷ |
| ವೃತ್ತಿ | : | ಗಾರೆ ಕೆಲಸ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 22.8.2024**

**<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>**

1. ನನಗೆ 4 ನೇ ಆರೋಪಿಯ ಪರಿಚಯ ಇರುತ್ತದೆ. ಚಾಸಾ 26 ರವರ ಪರಿಚಯ ಇರುತ್ತದೆ. ನಾನು ಟಾಟಾ ಎಸಿ ಗಾಡಿ ಓಡಿಸುತ್ತಿದ್ದೆ. ರಮೇಶನು ಟಾಟಾ ಎಸಿ ಓಡಿಸುತ್ತಿದ್ದರಿಂದ ಆತನ ಪರಿಚಯ ಇರುತ್ತದೆ. ಈ ಕೇಸಿನ ಬಗ್ಗೆ ನನಗೇನು ಗೊತ್ತಿಲ್ಲ. 4 ನೇ ಆರೋಪಿಯು ಕಾರು ಓಡಿಸಲು ಮತ್ತು ಕಾರನ್ನು ಅರೆಂಜ್ ಮಾಡಲು ನನ್ನನ್ನು ಕೇಳಿರುವುದಿಲ್ಲ.ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ನಾನು ಹೇಳಿಕೆ ಕೊಟ್ಟಿಲ್ಲ.

( **ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ** ).

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

2. 4 ನೇ ಆರೋಪಿಯು ನನ್ನನ್ನು ದಿಃ 20-3-2021 ರಂದು ಫೋನ್ ಮಾಡಿ ಬಾಡಿಗೆ ಕಾರು ಬೇಕು ಎಂದು ಮತ್ತು ಅದಕ್ಕೆ ಓಡಿಸಲು ಚಾಲಕ ನೇಮಕ ಮಾಡಬೆಕು ಎಂದು ಹೇಳಿದ್ದನು ಎಂದರೆ ಸರಿಯಲ್ಲ. ನಾನು ಚಾಸಾ 26 ರವರಿಗೆ ಹೇಳಿ ಗಾಡಿಯ ವ್ಯವಸ್ಥೆ ಮಾಡಿದ್ದೆ ಎಂದರೆ ಸರಿಯುಲ್ಲ. ದಿಃ 20-3-2021 ರಂದು ಕಾರಿನಲ್ಲಿ ಆರೊಜಾೀಪಿ 3, 4 ಮತ್ತು ಚಾಸಾ 26 ರವರು

1 ಮತ್ತು 2 ನೇ ಆರೊಪಿತರೊಂದಿಗೆ ಮೃತರನ್ನು ಹಣಕಾಸಿನ ವಿಚಾರಕ್ಕಾಗಿ ಕೊಲೆ ಮಾಡುವ ಉದ್ದೇಶದಿಂದ ಅಪಹರಿಸಿಕೊಂಡು ಹೊಸಪೇಟೆ ಹೋದರು ಎಂದರೆ ಸರಿಯಲ್ಲ. ನಂತರ ದಿಃ 21-3-2021 ರ ರಾತ್ರಿ 9-30 ರ ಸುಮಾರಿಗೆ ಸಿರಿಗೇರಿ ರಸ್ತೆಯ ದಾಸಾಪುರ ಹತ್ತಿರ ಎಲ್ ಎಲ್ ಸಿ ಕೆನಾಲ್ ಬಳಿ ಅವರಿಬ್ಬರನ್ನು ಕಬ್ಬಿಣದ ರಾಡ್ ನಿಂದ ತಲೆಗೆ ಹೊಡೆದು ಕಾಲುವೆ ನೀರಿಗೆ ಹಾಕಿ ಬಂಗಾರದ ಆಭರಣಗಳನ್ನು ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-54 ಎಂದು ಗುರುತಿಸಲಾಯಿತು. ನಿಪಿ-54 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಎಸ್ ಮತ್ತು ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ವಿಶೇಷ ನ್ಯಾಯಾಲಯ, ಬಳ್ಳಾರಿ.**